ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

25

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 11-12-202

# ಸುಗ್ರೀವಾಜ್ಞೆ ಮಾರ್ಗ

## ಪರಿಷತ್‌ನಲ್ಲಿ ಮಂಡನೆಯಾಗದ ಗೋಹತ್ಯೆ ವಿಧೇಯಕ

## ವಿಶೇಷ ಅಧಿವೇಶನ ಕರೆದು ಅಂಗೀಕಾರ ಪಡೆವ ಸಾಧ್ಯತೆ

**ಬೆಂಗಳೂರು:** ರಾಜ್ಯ ಬಿಜೆಪಿ ಸರ್ಕಾರದ ಮಹತ್ವಾಕಾಂಕ್ಷಿ ವಿಧೇಯಕ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020'(ಗೋಹತ್ಯೆ ನಿಷೇಧ ಕಾಯ್ದೆ) ಪರಿಷತ್‌ನಲ್ಲಿ ಮಂಡನೆಯಾಗದೇ ಹೋಯಿತು!

ಬುಧವಾರವೇ ವಿಧಾನಸಭೆಯಲ್ಲಿ ಈ ಕಾಯ್ದೆ ಅಂಗೀಕಾರಗೊಂಡು, ಗುರುವಾರ ವಿಧಾನಪರಿಷತ್‌ಗೆ ಬರಬೇಕಿತ್ತು. ಆದರೆ, ಪ್ರತಿಪಕ್ಷದ ನಡೆ, ಸರ್ಕಾರದ ಲೆಕ್ಕಾಚಾರವನ್ನು ಕೆಳಗಾಗಿಸಿದ್ದು ಮತ್ತು ಪರಿಷತ್ ಕಲಾಪವನ್ನು ಸಭಾಪತಿಗಳು ಮುಂದೂಡಿದ್ದರಿಂದ ವಿಧೇಯಕ ಮಂಡನೆಯಾಗಲೇ ಇಲ್ಲ. ಹೀಗಾಗಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಅಥವಾ ವಿಶೇಷ ಅಧಿವೇಶನ ಕರೆದು ವಿಧೇಯಕಕ್ಕೆ ಅಂಗೀಕಾರ ಪಡೆಯುವ ಸಾಧ್ಯತೆ ಇದೆ.

**ಸಭಾಪತಿ ಶಾಕ್:** ದಿಢೀರ್ ಆಗಿ ಅನಿರ್ದಿಷ್ಟಾವಧಿಗೆ ಕಲಾಪ ಮುಂದೂಡುವ ಮೂಲಕ ಸರ್ಕಾರಕ್ಕೆ ಪರಿಷತ್ ಸಭಾಪತಿಗಳು 'ಶಾಕ್' ನೀಡಿದರು. ಆದರೆ ಸದನ ಸಲಹಾ ಸಮಿತಿಯಲ್ಲಿ ನಿರ್ಧಾರವಾಗದೆ, ಏಕಾಏಕಿ ಕಲಾಪ ಮುಂದೂಡಲಾಗಿದೆ. ಹಾಗಾಗಿ, ವಿಶೇಷ ಅಧಿವೇಶನ ಕರೆಯಲು ಸಭಾಪತಿಗಳಿಗೆ ಸೂಚನೆ ನೀಡುವಂತೆ ರಾಜ್ಯಪಾಲರಿಗೆ ಮನವಿ ಮಾಡಲು ಸರ್ಕಾರ ಉದ್ದೇಶಿಸಿದೆ. ಇದು ಸಾಧ್ಯವಾಗದಿದ್ದರೆ, ವಿಧೇಯಕಕ್ಕೆ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ತರುವ ಯೋಚನೆಯೂ ಇದೆ.

ಈ ಮಧ್ಯೆ, ಕೆಳಮನೆಯಲ್ಲಿ ಅಂಗೀಕಾರಗೊಂಡ ವಿಧೇಯಕವನ್ನು ಗುರುವಾರ ಮೇಲ್ಮನೆಯಲ್ಲಿ ಕೈಗೆತ್ತಿಕೊಳ್ಳುವ ಲೆಕ್ಕಾಚಾರ ಇತ್ತು. ಕಾರ್ಯಕಲಾಪಗಳ ಪಟ್ಟಿಯಲ್ಲೂ ವಿಷಯ ಸೇರಿಸಲಾಗಿತ್ತು. ಪರಿಷತ್ತಿನ ಬಿಜೆಪಿಯ ಎಲ್ಲ ಸದಸ್ಯರು ಕೇಸರಿ ಶಲ್ಯ ಹಾಕಿಕೊಂಡು ಸಿದ್ಧತೆಗಳೊಂದಿಗೆ ಹಾಜರಾಗಿದ್ದರು. ಆದರೆ ಕಾಂಗ್ರೆಸ್ ಮತ್ತು ಜೆಡಿಎಸ್, ವಿಧೇಯಕವೇ ಮಂಡನೆಯಾಗದಂತೆ ಮಾಡಿತು. ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆ ಎರಡು-ಮೂರು ವಿಧೇಯಕಗಳು ಸುದೀರ್ಘ ಚರ್ಚೆಯೊಂದಿಗೆ ಅಂಗೀಕಾರಗೊಂಡವು.

▶ 5ನೇ ಪುಟಕ್ಕೆ

3 ಪಕ್ಷಗಳ ರಾಜಕೀಯ ತಂತ್ರಗಾರಿಕೆ » 5



ಬೆಂಗಳೂರು ಬಿಜೆಪಿ ಕಚೇರಿಯಲ್ಲಿ ಗೋವುಗಳಿಗೆ ಪೂಜೆ.


### ಮುಂದಿನ ದಾರಿ

- ರಾಜ್ಯಪಾಲರ ಮೊರೆಹೋಗಿ, ವಿಶೇಷ ಅಧಿವೇಶನ ಕರೆಯಲು ಒತ್ತಡ ತರಬಹುದು.
- ಮುಂದಿನ ಸಂಪುಟದಲ್ಲಿ ಸುಗ್ರೀವಾಜ್ಞೆ ಹೊರಡಿಸಬಹುದು.
- ಗ್ರಾಪಂ. ಚುನಾವಣೆ ಪೂರ್ಣಗೊಳ್ಳುವವರೆಗೆ ಕಾಯಬಹುದು.
- ಜನವರಿಯಲ್ಲಿ ಜಂಟಿ ಅಧಿವೇಶನ ನಡೆಯಲಿದ್ದು ಆಗ ಮಂಡಿಸಬಹುದು.

## ರಾಜ್ಯಪಾಲರಿಗೆ ದೂರು?

ಸಭಾಪತಿಗಳ ನಡೆ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಲಿದ್ದು, ಶುಕ್ರವಾರ ಸ್ವತಃ ಸಭಾಪತಿಗಳಿಗೂ ಕಲಾಪ ಮುಂದುವರಿಸುವಂತೆ ಪತ್ರ ಬರೆಯಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಕಲಾಪ ಮೊಟಕುಗೊಂಡ ನಂತರ ಮಾತನಾಡಿದ ಅವರು, ಇದೊಂದು ಕೆಟ್ಟ ಸಂಪ್ರದಾಯ. ಕಲಾಪ ಸಲಹಾ ಸಮಿತಿಯಲ್ಲಿ ಅಂತಿಮ ನಿರ್ಧಾರವಾಗದ ಹೊರತು ಮುಂದೂಡುವಂತಿಲ್ಲ. ಸದನ ಏಕಾಏಕಿ ಮುಂದಕ್ಕೆ ಹಾಕುವ ಅಧಿಕಾರ ಇಲ್ಲ. ಹಾಗಾಗಿ, ರಾಜ್ಯಪಾಲರಿಗೆ ದೂರು ನೀಡುತ್ತೇವೆ ಎಂದರು. ಮಂಗಳವಾರ ಅವಿಶ್ವಾಸ ನಿರ್ಣಯ ಚರ್ಚೆ ಮಾಡಲು ಪರಿಷತ್ ನಡೆಸಬೇಕು. ಅವಿಶ್ವಾಸ ನಿರ್ಣಯ ಮಂಡಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಕಲಾಪ ಮುಂದೂಡಿದಂತಿದೆ. ಇದು ನಿಜಕ್ಕೂ ಸರಿಯಲ್ಲ. ಈಗಲೂ ತಿದ್ದಿಕೊಂಡು ಕಲಾಪ ನಡೆಸಬೇಕು. ನಾವು ಇದರಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ ಎಂದೂ ಸ್ಪಷ್ಟಪಡಿಸಿದರು.



> ವಿಧಾನ ಪರಿಷತ್ತಿನಲ್ಲಿ ಗೋಹತ್ಯೆ ನಿಷೇಧ ಕಾಯ್ದೆಗೆ ಅಂಗೀಕಾರ ಸಿಗದಂತೆ ಮಾಡಲು ವಿಪಕ್ಷಗಳು ಯೋಚಿಸಿದ್ದವು. ನಾವು ಕೂಡ ಅವರಿಗಿಂತ ಚಾಣಾಕ್ಷರಿದ್ದೇವೆ. ಮುಂದಿನ ಸಂಪುಟದಲ್ಲಿ ಏನಾಗುತ್ತದೆ ಕಾದುನೋಡಿ.
>
> • **ಆರ್. ಅಶೋಕ್**, ಕಂದಾಯ ಸಚಿವ

## ಸದನ ಬಹಿಷ್ಕಾರ

ಬಿಜೆಪಿ ಬುಧವಾರ ತರಾತುರಿಯಲ್ಲಿ ಗೋಹತ್ಯೆ ನಿಷೇಧ ವಿಧೇಯಕ ಮಂಡಿಸಿರುವುದನ್ನು ಖಂಡಿಸಿ ಬುಧವಾರ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದ್ದರು. ಅಲ್ಲದೇ ಸರ್ಕಾರದ ನಡೆ ಖಂಡಿಸಿ ಸದನ ಬಹಿಷ್ಕರಿಸುವುದಾಗಿ ಘೋಷಿಸಿದ್ದರು. ಅದರಂತೆ ಗುರುವಾರ ವಿಧಾನಸೌಧಕ್ಕೆ ಆಗಮಿಸಿದರೂ ಸದನಕ್ಕೆ ಹಾಜರಾಗದೇ ಬಹಿಷ್ಕರಿಸಿದರು. ಬೆಳಗ್ಗೆ ವಿಧಾನಸಭೆ ಕಲಾಪ ಆರಂಭಿಸಿದಾಗ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ಹಾಜರಾಗದೇ ಇದ್ದುದರಿಂದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ವಿಧಾನಸಭೆ ಕಾರ್ಯದರ್ಶಿ ವಿಶಾಲಾಕ್ಷಿ ಅವರ ಮೂಲಕ ಮಾತುಕತೆಗೆ ಆಹ್ವಾನಿಸಿದ್ದರು. ಆದರೆ, ಶಾಸಕಾಂಗ ಸಭೆ ನಡೆಯುತ್ತಿರುವುದರಿಂದ ಸ್ಪೀಕರ್ ಕರೆದ ಸಂಧಾನ ಸಭೆಗೆ ಹಾಜರಾಗಲು ಆಗುವುದಿಲ್ಲ ಎಂದು ಕೈ ಸದಸ್ಯರು ಅವರಿಗೆ ಹೇಳಿ ಕಳುಹಿಸಿದರು.

# ಮೂರು ಪಕ್ಷಗಳ ರಾಜಕೀಯ ತಂತ್ರಗಾರಿಕೆ

**ಬೆಂಗಳೂರು:** ಗೋಹತ್ಯೆ ನಿಷೇಧ ವಿಧೇಯಕ ಮಂಡನೆ ಸಂಬಂಧ ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ತಮ್ಮದೇ ರೀತಿಯಲ್ಲಿ ರಾಜಕೀಯ ದಾಳಗಳನ್ನು ಉರುಳಿಸಿವೆ.

ಗೋಹತ್ಯೆ ನಿಷೇಧ ವಿಧೇಯಕವನ್ನು ವಿಧಾನಸಭೆಯಲ್ಲಿ ಅಂಗೀಕಾರಗೊಳ್ಳುವಂತೆಮಾಡುವಲ್ಲಿಬಿಜೆಪಿಯಶಸ್ವಿಯಾಗಿದೆ. ಇದರ ಬೆನ್ನಿಗೇ ವಿಧಾನಪರಿಷತ್‌ನಲ್ಲಿ ಮಸೂದೆ ಮಂಡನೆಗೆ ಅವಕಾಶ ಸಿಗದಿರುವ ಕಾರಣ, ಕಾಯ್ದೆ ರೂಪಿಸಲು ತನ್ನದೇ ಆದ ರಾಜಕೀಯ ತಂತ್ರಗಾರಿಕೆಗೆ ಬಿಜೆಪಿ ಮುಂದಾಗಿದೆ.

ಆದರೆ ವಿಧಾನಸಭೆಯಲ್ಲಿ ವಿರೋಧ ವ್ಯಕ್ತಪಡಿಸಿದ್ದ ಕಾಂಗ್ರೆಸ್ ನಾಯಕರು ಗುರುವಾರ ಈ ಬಗ್ಗೆ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸದಿರಲು ನಿರ್ಧರಿಸಿದ್ದಾರೆ. ಗುರುವಾರ ಬೆಳಿಗ್ಗೆ ವಿಧಾನಸೌಧದಲ್ಲಿ ಸುಮಾರು ಎರಡು ಗಂಟೆಗಳ ಕಾಲ ನಡೆದ ಸುದೀರ್ಘ ಚರ್ಚೆಯಲ್ಲಿ ಬಿಜೆಪಿ ಏಕಾಏಕಿ ತರಾತುರಿಯಲ್ಲಿ ಗೋಹತ್ಯೆ ವಿಧೇಯಕ ಮಂಡನೆ ಮಾಡಿರುವ ಬಗ್ಗೆ ಸಭೆಯಲ್ಲಿ ಅಕ್ರೋಶ ವ್ಯಕ್ತವಾಗಿದೆ. ಬಿಜೆಪಿ ಗೋಹತ್ಯೆ ವಿಧೇಯಕವನ್ನು ಗ್ರಾಮ ಪಂಚಾಯತಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೆ ತರಾತುರಿಯಲ್ಲಿ ಮಂಡನೆ ಮಾಡಿದ್ದು, ಇದನ್ನು ಬಹಿರಂಗವಾಗಿ ಕಾಂಗ್ರೆಸ್ ವಿರೋಧಿಸುವುದರಿಂದ ಹಿಂದೂ ಮತಗಳನ್ನು ಒಗ್ಗೂಡಿಸಲು ಅನುಕೂಲವಾಗುತ್ತದೆ ಎನ್ನುವ ಲೆಕ್ಕಾಚಾರದ ಹಾಕಿಕೊಂಡಂತಿದೆ ಎನ್ನುವ ಬಗ್ಗೆ ಕಾಂಗ್ರೆಸ್ ನಾಯಕರು ಗಂಭೀರವಾಗಿ ಚರ್ಚೆ ನಡೆಸಿದ್ದಾರೆ. ಗೋಹತ್ಯೆ ನಿಷೇಧ ವಿಚಾರವಾಗಿ ಯಾವುದೇ ರೀತಿಯ ಹೇಳಿಕೆಗಳನ್ನು ಯಾರೂ ನೀಡಬಾರದು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ ಎಂದು ತಿಳಿದು ಬಂದಿದೆ.

ಇತ್ತ ಜೆಡಿಎಸ್ ಗೋಹತ್ಯೆ ನಿಷೇಧ ಕಾಯ್ದೆ ವಿಚಾರದಲ್ಲಿ ಸರ್ಕಾರದ ನಿರ್ಧಾರದಿಂದ ಅಂತರ ಕಾಯ್ದುಕೊಂಡಿದೆ. ಭೂ ಸುಧಾರಣೆ ಕಾಯ್ದೆ ವಿಷಯದಲ್ಲಿ ಸರ್ಕಾರದ ಕ್ರಮ ಸಮರ್ಥನೆ ಮಾಡಿಕೊಂಡರೂ ಗೋ ಹತ್ಯೆ ವಿಷಯದಲ್ಲಿ ರೈತ ದೃಷ್ಟಿಕೋನದ ಪರಾಮರ್ಶೆ ಅಗತ್ಯ ಎಂದು ಪ್ರತಿಪಾದಿಸಿದೆ.

## ಸುಗ್ರೀವಾಜ್ಞೆ ಮಾರ್ಗ

**1ನೇ ಪುಟದಿಂದ ▶** ನಂತರ ಸಭಾ ನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಗೋಹತ್ಯೆ ನಿಷೇಧ ಕಾಯ್ದೆಯನ್ನು ಶುಕ್ರವಾರ ಬೆಳಗ್ಗೆ ಮಂಡಿಸಲಾಗುತ್ತದು ಎಂದು ಸಭೆ ಗಮನಕ್ಕೆ ತಂದರು. ಅಲ್ಲಿಯವರೆಗೆ ಕಲಾಪ ಮೊಟಕುಗೊಳ್ಳಲಿರುವ ಯಾವುದೇ ಸುಳಿವು ನೀಡದ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಕೊನೇ ಗಳಿಗೆಯಲ್ಲಿ 'ಗ್ರಾಮ ಪಂಚಾಯ್ತಿಗಳ ಚುನಾವಣೆ ಹಿನ್ನೆಲೆಯಲ್ಲಿ ಡಿ. 10ರಿಂದ (ಗುರುವಾರದಿಂದ) ಅನಿರ್ದಿಷ್ಟಾವಧಿ ಕಲಾಪ ಮುಂದೂಡಲಾಗಿದೆ' ಎಂದು ಪ್ರಕಟಿಸಿ ನಿರ್ಗಮಿಸಿದರು.

ಬುಧವಾರ ಸಭಾಪತಿಗಳ 'ಅವಿಶ್ವಾಸ ನಿರ್ಣಯ ಮಂಡನೆಗೆ ಸಂಬಂಧಿಸಿದ ಗದ್ದಲದ ಬೆನ್ನಲ್ಲೇ ನಡೆದ ಸದನ ಸಲಹಾ ಸಮಿತಿ ಸಭೆಯಲ್ಲಿ ಪರಿಷತ್ತಿನ ಕಲಾಪ ಮುಂದುವರಿಸುವ ಬಗ್ಗೆ ಚರ್ಚೆ ನಡೆದಿತ್ತು. ಅಲ್ಲಿ ಆಡಳಿತ ಪಕ್ಷವು ಮುಂದುವರಿಸುವಂತೆ ಸಲಹೆ ನೀಡಿದರೆ, ಪ್ರತಿಪಕ್ಷಗಳು ಮೊಟಕುಗೊಳಿಸುವುದು ಸೂಕ್ತ ಎಂದು ಹೇಳಿದ್ದವು. ಆದರೆ, ಅಂತಿಮ ನಿರ್ಧಾರವನ್ನು ಮಾತ್ರ ಸಭಾಪತಿಗಳು ಗೌಪ್ಯವಾಗಿಟ್ಟಿದ್ದರು. ಗುರುವಾರ ಸಂಜೆ ಅದನ್ನು ಪ್ರಕಟಿಸುವ ಮೂಲಕ ಸರ್ಕಾರಕ್ಕೆ 'ಶಾಕ್' ನೀಡಿದರು.

ಈ ಮಧ್ಯೆ ಭೂಸುಧಾರಣಾ ವಿಧೇಯಕದ ಅಂಗೀಕಾರದ ವೇಳೆ ಆಡಳಿತ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿದ್ದ ಜೆಡಿಎಸ್, ಗೋಹತ್ಯೆ ನಿಷೇಧ ವಿಧೇಯಕ ವಿಚಾರದಲ್ಲಿ ಕಾಂಗ್ರೆಸ್ ಪರ ನಿಲ್ಲಲು ನಿರ್ಧರಿಸಿತ್ತು. ಒಂದು ವೇಳೆ ಪರಿಷತ್ತಿನಲ್ಲಿ ಮಂಡನೆಯಾದರೆ, ಅದಕ್ಕೆ ವಿರೋಧ ವ್ಯಕ್ತಪಡಿಸಬೇಕು. ಮತಕ್ಕೆ ಹಾಕಿದರೂ ವಿರುದ್ಧವಾಗಿ ಮತ ಚಲಾಯಿಸಲು ಉದ್ದೇಶಿಸಿತ್ತು ಎಂದು ಮೂಲಗಳು ತಿಳಿಸಿವೆ.

**ಅವಿಶ್ವಾಸ ಮಂಡನೆ:** ಮೇಲ್ಮನೆಯಲ್ಲಿ ಸಭಾಪತಿಗಳ ವಿರುದ್ಧ ಆಡಳಿತ ಪಕ್ಷದ ಸದಸ್ಯರು ಮಂಡಿಸಿದ ಅವಿಶ್ವಾಸ ನಿರ್ಣಯ ಪರೋಕ್ಷವಾಗಿ ವಿಧೇಯಕ ಮಂಡನೆಗೆ ಅಡ್ಡಿಯಾಯಿತು. ಹೇಗೆಂದರೆ, ಈ ವಿಚಾರ ಪ್ರಸ್ತಾಪ ಆಗುತ್ತಿದ್ದಂತೆ ಬುಧವಾರ ಸಭೆಯಲ್ಲಿ ಕೋಲಾಹಲ ಉಂಟಾಯಿತು. ನೋಟಿಸ್ ನೀಡಿದ ನಂತರದಿಂದ 14 ದಿನಗಳ ಲೆಕ್ಕಾಚಾರ ಹಾಕಲು ಶುರುವಾಯಿತು. ಒಂದು ವೇಳೆ ಕಲಾಪ ಮುಂದುವರಿಸಿದರೆ, ಸಭಾಪತಿಗಳನ್ನು ಕೆಳಗಿಳಿಸುವ ಪ್ರಯತ್ನ ನಡೆಯುತ್ತಿತ್ತು. ಹಾಗಾಗಿ, ಮೊಟಕುಗೊಳಿಸುವ ಲೆಕ್ಕಾಚಾರ ನಡೆಯಿತು.

ಗುರುವಾರ ಸಂಜೆ ಸದಸ್ಯ ಆಯನೂರು ಮಂಜುನಾಥ್ ಮತ್ತೆ ಅವಿಶ್ವಾಸ ನಿರ್ಣಯ ಮಂಡನೆಗೆ ಮುಂದಾದರು. ಆಗ ಪ್ರತಿಕ್ರಿಯಿಸಿದ ಸಭಾಪತಿಗಳು, 'ಅವಿಶ್ವಾಸ ನಿರ್ಣಯ ಸಂಬಂಧ ಕಾನೂನು ತಜ್ಞರ ಸಲಹೆ ಪಡೆದು ತೀರ್ಮಾನ ಕೈಗೊಂಡಿದ್ದೇನೆ. ಆ ನಿರ್ಣಯವನ್ನು ಅವಿಶ್ವಾಸ ನಿರ್ಣಯ ಮಂಡನೆ ನೋಟಿಸ್ ನೀಡಿದ ಸದಸ್ಯರಿಗೆ ತಲುಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಸ್ಪಷ್ಟಪಡಿಸಿದರು.